ಅ. ಸದರಿ ಮನೆಗಳು ಪೂರ್ಣವಾಗಿದೆಯೇ ;

ಇ. ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ವಸತಿ ಮಂತ್ರಿಗಳು) :--

ಅ. ತಾಲ್ಲೂಕಿಗೆ ಇಲ್ಲಿಯವರೆಗೆ ಮಂಜೂರಾದ ಹಣ ರೂ. 61,71,000-00 ತಾಲ್ಲೂಕಿಗೆ ಇಲ್ಲಿಯವರೆಗೆ ನಿರ್ಮಿಸಲು ಮಂಜೂರಾದ ಒಟ್ಟು ಮನೆಗಳು 2929.
(ಗ್ರಾಮವಾರು ಮಾಹಿತಿಗಳನ್ನು ಜಿಲ್ಲಾಧಿಕಾರಿಗಳಿಂದ ಪಡೆಯಬಹುದಾಗಿದೆ).

ಅ. 2929 ಮನೆಗಳ ಪೈಕಿ 2139 ಮನೆಗಳು ಪೂರ್ಣಗೊಂಡಿವೆ.

ಇ. 790 ಮನೆಗಳು ಇನ್ನೂ ಪೂರ್ಣಗೊಳ್ಳಬೇಕಾಗಿವೆ. ಈ ಪೈಕಿ 380 ಮನೆಗಳ ಕಟ್ಟಡದ ಕೆಲಸ ವಿವಿಧ ಹಂತದಲ್ಲಿವೆ ಮತ್ತು 410 ಫಲಾನುಭವಿಗಳು ಮನೆ ಕಟ್ಟಿದ್ದರಿಂದ ಅವರನ್ನು ಬದಲಾಯಿಸಿ ಬೇರೆ ಫಲಾನುಭವಿಗಳು ಆರಿಸಲಾಗುತ್ತಿದೆ. ಉಳಿದ ಮನೆಗಳನ್ನು ಆದಷ್ಟು ಶೀಘ್ರವಾಗಿ ಕಟ್ಟಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

Sub :—K.S.R.T.C. Bus Facilities to the Rural Areas of Channapatna Taluk.

ಪ್ರ. 626 (1627) ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ. ಚನ್ನಪಟ್ಟಣ ತಾಲ್ಲೂಕಿನ ಗ್ರಾಮಾಂತರ ಪ್ರದೇಶಕ್ಕೆ ಸರಕಾರಿ ಸಾರಿಗೆ ವ್ಯವಸ್ಥೆ ಮಾಡುವುದು ಸರ್ಕಾರದವರ ಗಮನದಲ್ಲಿದೆಯೆ ;

ಆ. ಹಾಗಿದ್ದಲ್ಲಿ ಯಾವಾಗ ಅದನ್ನು ಕಾರ್ಯಗತ ಮಾಡಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಸಚಿವರು) :-

ಅ. ಈಗಾಗಲೇ ಚನ್ನಪಟ್ಟಣದಿಂದ ಕೆಲವು ಹಳ್ಳಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಾಹನಗಳನ್ನು ಓಡಿಸುತ್ತಿದೆ.

ಆ. 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆಗೇ ಉತ್ತರ ಉದ್ಭವಿಸುವುದಿಲ್ಲ.

ವಿಷಯ : ಮಂಗಳೂರು ಲೇಬರ್ ಕೋರ್ಟಿಗೆ ಅಧ್ಯಕ್ಷರ ನೇಮಕ

ಪ್ರ. 1318 ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಮಾನ್ಯ ಕಾರ್ಮಿಕ ಮತ್ತು ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಮಂಗಳೂರು ಕಾರ್ಮಿಕ ನ್ಯಾಯಾಲಯದ ಅಧ್ಯಕ್ಷರ ಹುದ್ದೆ ಬಹಳ ಸಮಯದಿಂದ ಖಾಲಿ ಇರುವುದು ನಿಜವೆ ;

ಆ. ಹಾಗಿದ್ದಲ್ಲಿ ಅದು ಎಷ್ಟು ಸಮಯದಿಂದ ಖಾಲಿ ಇದೆ ;

ಇ. ಆ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ, ಬಾಕಿ ಇರುವ ವಿವಾದಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಸಮಯದಿಂದ ಈ ವಿವಾದಗಳು ಬಾಕಿ ಉಳಿದಿವೆ ?

ಶ್ರೀ ಅಜೀಜ್ ಸೇಠ್. (ಕಾರ್ಮಿಕ ಮತ್ತು ವರ್ಕ್ಸ್) ;--

ಅ. ಹೌದು. ಮಂಗಳೂರು ಕಾರ್ಮಿಕ ನ್ಯಾಯಾಲಯದ ಅಧ್ಯಕ್ಷರ ಹುದ್ದೆ ಖಾಲಿ ಇದೆ.

ಆ. 8-12-83 ರಿಂದ.

ಇ. 1-3-1984ರವರೆವಿಗೆ 440 ಪ್ರಕರಣಗಳು ಇತ್ಯರ್ಥಕ್ಕಾಗಿ ಮಂಗಳೂರು ಕಾರ್ಮಿಕ ನ್ಯಾಯಾಲಯದಲ್ಲಿ ಉಳಿದಿವೆ.